


بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ (ಅಲ್ಲಾಹನ ಮೇಲಿನ ಭರವಸೆ) – ಹಝ್ರತ್ ಪೈಗಂಬರ್[ಸ]ರ ಪವಿತ್ರ ಜೀವನದ ಪರಿಪೂರ್ಣ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–09–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನು ಹಝ್ರತ್ ಪೈಗಂಬರ್[ಸ]ರನ್ನು ಪರಿಪೂರ್ಣ ಮನುಷ್ಯನನ್ನಾಗಿ ಮಾಡಿ ಇಡೀ ಮಾನವಕುಲಕ್ಕೆ ಅತ್ಯುತ್ತಮ ಮಾದರಿಯನ್ನಾಗಿಸಿದ್ದಾನೆ ಮತ್ತು ಪ್ರತಿಯೊಂದು ನೈತಿಕ ಗುಣವನ್ನು ಅವರ ವ್ಯಕ್ತಿತ್ವದಲ್ಲಿ ಹುಟ್ಟುಹಾಕಿ ಅದನ್ನು 'ಶ್ರೇಷ್ಠ ನೈತಿಕತೆ'ಯನ್ನಾಗಿಸಿದ್ದಾನೆ. ತಮ್ಮೊಳಗೆ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಮತ್ತು ನೈತಿಕತೆಯ ಅತ್ಯುನ್ನತ ಮಟ್ಟವನ್ನು ತಲುಪಲು ಬಯಸುವುದಾದರೆ, ಈ ಶ್ರೇಷ್ಠ ಪ್ರವಾದಿಯನ್ನು ಅನುಸರಿಸಬೇಕು ಎಂದು ಸತ್ಯವಿಶ್ವಾಸಿಗಳನ್ನು ಉಪದೇಶಿಸಲಾಗಿದೆ. ಏಕೆಂದರೆ ಇದುವೇ ಅಲ್ಲಾಹನ ಸಂಪ್ರೀತಿಯನ್ನು ಪಡೆಯುವ ಮಾರ್ಗವಾಗಿದೆ. ಹಝ್ರತ್ ಪೈಗಂಬರ್[ಸ] ಪ್ರತಿಯೊಂದು ನೈತಿಕ ಗುಣವನ್ನು ಅತ್ಯುನ್ನತ ಮಟ್ಟಕ್ಕೆ ತಲುಪಿಸಿದ್ದಲ್ಲದೆ, ಸತ್ಯವಿಶ್ವಾಸಿಗಳಿಗೂ ಈ ಉನ್ನತ ಗುಣಮಟ್ಟವನ್ನು ಸಾಧಿಸಲು ಪ್ರಯತ್ನಿಸುವಂತೆ ತಾಕೀತು ಮಾಡಿದ್ದರು. ನಬಿ[ಸ]ರ ಜೀವನ ಚರಿತ್ರೆಯಲ್ಲಿ **'ತವಕ್ಕುಲ್ ಅಲಲ್ಲಾಹ್'** (ಅಲ್ಲಾಹನ ಮೇಲಿನ ಭರವಸೆ) ಎಂಬ ನೈತಿಕ ಗುಣ ಸಹ ಬಹಳಷ್ಟು ಎದ್ದುಕಾಣುತ್ತದೆ.

ಅಲ್ಲಾಹನು ಹೀಗೆ ಹೇಳುತ್ತಾನೆ: **"**ಹೇ ಪ್ರವಾದಿ, ನಾವು ನಿನ್ನನ್ನು ಲೋಕದ ಮೇಲ್ನೋಟಗಾರನನ್ನಾಗಿ, ಸತ್ಯವಿಶ್ವಾಸಿಗಳಿಗೆ ಶುಭಸುದ್ದಿ ನೀಡುವವನನ್ನಾಗಿ, ಸತ್ಯನಿಷೇಧಿಗಳಿಗೆ ಎಚ್ಚರಿಕೆ ನೀಡುವವನನ್ನಾಗಿ, ಅಲ್ಲಾಹನ ಆಜ್ಞೆಯಂತೆ ಅವನ ಕಡೆಗೆ ಕರೆಯುವವನನ್ನಾಗಿ ಹಾಗೂ ಬೆಳಗುವ ಸೂರ್ಯನನ್ನಾಗಿ ಮಾಡಿ ಕಳುಹಿಸಿದ್ದೇವೆ. ಸತ್ಯವಿಶ್ವಾಸಿಗಳಿಗೆ ಅಲ್ಲಾಹನ ಕಡೆಯಿಂದ ಬಹುದೊಡ್ಡ ಅನುಗ್ರಹವಿದೆ ಎಂಬ ಶುಭವಾರ್ತೆ ನೀಡಿರಿ. ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳ ಮಾತನ್ನು ಕೇಳಬೇಡಿರಿ, ಅವರು ನೀಡುವ ತೊಂದರೆಗಳನ್ನು ಕಡೆಗಣಿಸಿರಿ ಮತ್ತು ಅಲ್ಲಾಹನ ಮೇಲೆ ಭರವಸೆ ಇಡಿರಿ; ಸಂರಕ್ಷಕನಾಗಿ ಅಲ್ಲಾಹನು ಸಾಕು.**"**. ಸತ್ಯವಿಶ್ವಾಸದಲ್ಲಿ ನೆಲೆನಿಂತರೆ, ಅಲ್ಲಾಹನ ಆಜ್ಞೆಗಳನ್ನು ಪಾಲಿಸಿದರೆ ಮತ್ತು ಅವನ ಮೇಲೆ ಸಂಪೂರ್ಣ ಭರವಸೆ ಇಟ್ಟರೆ, ಪ್ರತಿಯೊಂದು ಸಂಕಷ್ಟದ ಸಮಯದಲ್ಲಿ ಅಲ್ಲಾಹನೇ ಸಾಕು ಎಂಬ ಶುಭವಾರ್ತೆಯೂ ಸತ್ಯವಿಶ್ವಾಸಿಗಳಿಗೆ ಇದರಲ್ಲಿದೆ. ಮತ್ತೊಂದು ಕಡೆ, ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು ಎಂದು ಹೇಳಲಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: **"**ಹಝ್ರತ್ ಪೈಗಂಬರ್[ಸ]ರ ಜೀವನದ ಘಟನೆಗಳನ್ನು ಗಮನಿಸಿದರೆ ಈ ವಿಷಯವು ಅತ್ಯಂತ ಸ್ಪಷ್ಟವಾಗುತ್ತದೆ; ಹಝ್ರತ್ ಪೈಗಂಬರ್[ಸ] ಅತ್ಯುನ್ನತ ಮಟ್ಟದ ನಿಷ್ಠಾವಂತ, ಪರಿಶುದ್ಧ ಮನಸ್ಸಿನವರು, ದೇವನಿಗಾಗಿ ಪ್ರಾಣ ಮುಡಿಪಾಗಿಡುವವರು ಹಾಗೂ ಸೃಷ್ಟಿಗಳ ಭಯ ಮತ್ತು ನಿರೀಕ್ಷೆಗಳಿಂದ ಸಂಪೂರ್ಣವಾಗಿ ಮುಖ ತಿರುಗಿಸಿಕೊಂಡು ಕೇವಲ ದೇವನ ಮೇಲೆಯೇ ಭರವಸೆ ಇಡುವವರಾಗಿದ್ದರು. ಪ್ರವಾದಿಗಳ ಜೀವನದ ಘಟನೆಗಳಲ್ಲಿ ಅಪಾಯದ ಸಂದರ್ಭಗಳಲ್ಲೂ ದೇವನ ಮೇಲೆ ಭರವಸೆಯಿಡುತ್ತಾ ಇಷ್ಟೊಂದು ದೃಢತೆ ಹಾಗೂ ಸ್ಥಿರತೆ ತೋರಿಸಿದ ಉದಾಹರಣೆ ಬೇರೆಲ್ಲೂ ಸಿಗುವುದಿಲ್ಲ.**"**.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: **"**ದೇವನೊಂದಿಗೆ ಹೃದಯವನ್ನು ಜೋಡಿಸಿಡುವುದು ಮತ್ತು ಲೌಕಿಕತೆಯನ್ನು ತ್ಯಜಿಸುವುದರ ಪ್ರಾಯೋಗಿಕ ಮಾದರಿ ಹಝ್ರತ್ ಪೈಗಂಬರ್[ಸ] ಆಗಿರುವರು. ಅವರಿಗೆ ಯಾರ ಹೊಗಳಿಕೆ ಅಥವಾ ನಿಂದನೆಯ ಪರಿವೆ ಇರಲಿಲ್ಲ. ಅವರಿಗೆ ಲೆಕ್ಕವಿಲ್ಲದಷ್ಟು ಸಂಕಷ್ಟಗಳು ಎದುರಾದವು, ಆದರೆ ದೇವನ ಕಡೆಯಿಂದ ಮಾಡಲು ಹೇಳಲಾದ ಕಾರ್ಯದಿಂದ ಅವರನ್ನು ಯಾವುದೇ ಆಮಿಷ ಅಥವಾ ದುರಾಸೆಗೆ ತಡೆಯಲು ಸಾಧ್ಯವಾಗಲಿಲ್ಲ. ಯಾರು 'ಮುತಬತ್ತಿಲ್' (ಲೌಕಿಕತೆಯಿಂದ ವಿಮುಖನಾಗಿ ದೇವನತ್ತ ಮುಖ ಮಾಡುವವನು) ಆಗಿರುತ್ತಾನೋ, ಅವನು 'ಮುತವಕ್ಕಿಲ್' (ದೇವನ ಮೇಲೆ ಭರವಸೆ ಇಡುವವನು) ಸಹ ಆಗಿರುತ್ತಾನೆ. ಅಂದರೆ, 'ಮುತವಕ್ಕಿಲ್' ಆಗಲು 'ಮುತಬತ್ತಿಲ್' ಆಗಬೇಕು ಎಂಬುದು ಷರತ್ತಾಗಿದೆ.

ಮನುಷ್ಯನು ಎಲ್ಲಿಯ ವರೆಗೆ ಇತರರ ಮೇಲೆ ಭರವಸೆ ಮತ್ತು ಆಧಾರವನ್ನು ಇಟ್ಟಿರುತ್ತಾನೋ, ಅಲ್ಲಿಯ ವರೆಗೆ ಸಂಪೂರ್ಣವಾಗಿ ಅಲ್ಲಾಹನ ಮೇಲೆ ಭರವಸೆ ಇಡಲು ಸಾಧ್ಯವಿಲ್ಲ. ದೇವನತ್ತ ಸಂಪೂರ್ಣವಾಗಿ ವಾಲುವವನು ಲೌಕಿಕತೆಯನ್ನು ಬಿಟ್ಟು ದೇವನೊಂದಿಗೆ ಸಂಬಂಧ ಬೆಳೆಸಿಕೊಳ್ಳುತ್ತಾನೆ. ನಮ್ಮ ನಬಿ(ಸ) ಪರಿಪೂರ್ಣ 'ಮುತಬತ್ತಿಲ್' ಆಗಿದ್ದರು ಮತ್ತು ಪರಿಪೂರ್ಣ 'ಮುತವಕ್ಕಿಲ್' ಸಹ ಆಗಿದ್ದರು.".

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅಲ್ಲಾಹನು ದುರ್ಬಲನೆಂದು ಭಾವಿಸದಿರಿ, ಅವನು ಮಹಾ ಶಕ್ತಿಶಾಲಿಯಾಗಿದ್ದಾನೆ. ಯಾವುದೇ ವಿಷಯದಲ್ಲಿ ನೀವು ಅವನ ಮೇಲೆ ಭರವಸೆ ಇಡುವಾಗ, ಅವನು ಖಂಡಿತವಾಗಿಯೂ ನಿಮಗೆ ಸಹಾಯ ಮಾಡುತ್ತಾನೆ. ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ, ಅಲ್ಲಾಹನು ಅವನಿಗೆ ಸಾಕು. ತಖ್ವದ (ದೇವಭಕ್ತಿಯ) ಅನುಗ್ರಹಗಳಲ್ಲಿ ಒಂದೇನೆಂದರೆ, ಧಾರ್ಮಿಕ ಕಾರ್ಯಗಳಿಗೆ ಅಡ್ಡಿಯಾಗುವಂತಹ ಸಂಕಷ್ಟಗಳಿಂದ ಅಲ್ಲಾಹನು ದೇವಭಯವುಳ್ಳವನನ್ನು ಮುಕ್ತಗೊಳಿಸುತ್ತಾನೆ. ಅದೇ ರೀತಿ ಅಲ್ಲಾಹನು ದೇವಭಯವುಳ್ಳವನಿಗೆ ವಿಶೇಷ ರೀತಿಯಲ್ಲಿ ಜೀವನಾಧಾರವನ್ನು ನೀಡುತ್ತಾನೆ. ಹಝ್ರತ್ ಪೈಗಂಬರ್(ಸ) ಅನಕ್ಷರಸ್ಥರಾಗಿದ್ದರೂ (ಉಮ್ಮಿ) ಇಡೀ ಪ್ರಪಂಚವನ್ನು ಎದುರಿಸಬೇಕಾಗಿತ್ತು; ಅಹ್ಲೇ ಕಿತಾಬಿನವರು (ಗ್ರಂಥಾನುಸಾರಿಗಳು), ತತ್ವಜ್ಞಾನಿಗಳು, ಉನ್ನತ ಮಟ್ಟದ ಶೈಕ್ಷಣಿಕ ಅಭಿರುಚಿಯುಳ್ಳವರು ಮತ್ತು ಜ್ಞಾನಿಗಳು ನಬಿ(ಸ)ರ ಎದುರಾಳಿಗಳಾಗಿದ್ದರು; ಆದರೆ ನಬಿ(ಸ)ರಿಗೆ ಎಷ್ಟೊಂದು ಆಧ್ಯಾತ್ಮಿಕ ಆಹಾರ (ಅರಿವು) ಲಭಿಸಿತೆಂದರೆ, ಅವರೆಲ್ಲರ ಮೇಲೂ ನಬಿ(ಸ) ವಿಜಯಶಾಲಿಯಾದರು ಮತ್ತು ಅವರೆಲ್ಲರ ತಪ್ಪುಗಳನ್ನು ತೋರಿಸಿಕೊಟ್ಟರು.".

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೀಗೆ ಹೇಳಿದರು: "ನೀವು ಅಲ್ಲಾಹನ ಮೇಲೆ ಭರವಸೆ ಇರಿಸಬೇಕಾದ ರೀತಿಯಲ್ಲಿ ಭರವಸೆ ಇರಿಸಿದರೆ, ಪಕ್ಷಿಗಳಿಗೆ ಆಹಾರ ನೀಡಲಾಗುವಂತೆಯೇ ನಿಮಗೂ ಆಹಾರ ನೀಡಲಾಗುವುದು. ಅವು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಹೊರಡುತ್ತವೆ ಮತ್ತು ಸಂಜೆ ಹೊಟ್ಟೆ ತುಂಬಿಸಿಕೊಂಡು ಮರಳಿ ಬರುತ್ತವೆ.".

ಹಝ್ರತ್ ಅಬೂಧರ್(ರ)ರಿಂದ ವರದಿಯಾಗಿದೆ, ನಬಿ(ಸ) ಹೀಗೆ ಹೇಳಿದರು: "ಲೋಕದ ಬಗ್ಗೆ ನಿರಾಸಕ್ತಿ ಎಂದರೆ, ಹಲಾಲನ್ನು ಹರಾಮ್ ಮಾಡುವುದಾಗಲಿ ಅಥವಾ ಸಂಪತ್ತನ್ನು ವ್ಯರ್ಥ ಮಾಡುವುದಾಗಲಿ ಅಲ್ಲ. ಲೋಕದ ಬಗ್ಗೆ ನಿರಾಸಕ್ತಿ ಎಂದರೆ, ನಿಮ್ಮ ಎರಡು ಕೈಗಳಲ್ಲಿ ಇರುವ ವಸ್ತುಗಳಿಗಿಂತ ಹೆಚ್ಚಿನ ಭರವಸೆ ಅಲ್ಲಾಹನ ಕೈಯಲ್ಲಿರುವ ವಸ್ತುವಿನ ಮೇಲೆ ಇರಿಸುವುದಾಗಿದೆ.".

ಹಝ್ರತ್ ಪೈಗಂಬರ್(ಸ) ತಮ್ಮ ದಿನನಿತ್ಯದ ವ್ಯವಹಾರಗಳಲ್ಲೂ ಅಲ್ಲಾಹನ ಮೇಲಿನ ಭರವಸೆಯನ್ನು ಮುಂದಿಟ್ಟುಕೊಂಡು ದುಆ ಮಾಡುತ್ತಿದ್ದರು. ಹಝ್ರತ್ ಉಮ್ಮು ಸಲ್ಮಾ(ರ) ವರದಿ ಮಾಡುತ್ತಾರೆ: ನಬಿ(ಸ) ತಮ್ಮ ಮನೆಯಿಂದ ಹೊರಡುವಾಗ ಹೀಗೆ ಹೇಳುತ್ತಿದ್ದರು: "ಅಲ್ಲಾಹನ ಹೆಸರಿನೊಂದಿಗೆ, ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟೆನು. ಹೇ ಅಲ್ಲಾಹ್, ನಾವು ಎಡವಿ ಬೀಳುವುದರಿಂದ ಅಥವಾ ದಾರಿ ತಪ್ಪುವುದರಿಂದ, ದೌರ್ಜನ್ಯವೆಸಗುವುದರಿಂದ ಅಥವಾ ನಮ್ಮ ಮೇಲೆ ದೌರ್ಜನ್ಯವೆಸಗಲ್ಪಡುವುದರಿಂದ, ಅಜ್ಞಾನದಿಂದ ವರ್ತಿಸುವುದರಿಂದ ಅಥವಾ ನಮ್ಮೊಂದಿಗೆ ಅಜ್ಞಾನದಿಂದ ವರ್ತಿಸಲ್ಪಡುವುದರಿಂದ ನಿನ್ನಲ್ಲಿ ಆಶ್ರಯ ಯಾಚಿಸುತ್ತೇವೆ.".

ಹಝ್ರತ್ ಬುರೈದಾ(ರ) ವರದಿ ಮಾಡುತ್ತಾರೆ: ನಬಿ(ಸ) ತಮ್ಮ ಮನೆಯಿಂದ ಹೊರಗೆ ಬರುವಾಗ ಹೀಗೆ ಹೇಳುತ್ತಿದ್ದರು: "ಅಲ್ಲಾಹನ ಹೆಸರಿನೊಂದಿಗೆ ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟೆನು, ಅಲ್ಲಾಹನ ಸೌಭಾಗ್ಯದಿಂದಲೇ ಒಳಿತು ಮಾಡುವ ಶಕ್ತಿ ಹಾಗೂ ಕೆಡುಕಿನಿಂದ ಪಾರಾಗುವ ಶಕ್ತಿ ಲಭಿಸುತ್ತದೆ. ಹೇ ಅಲ್ಲಾಹ್, ನಾನು ದಾರಿತಪ್ಪುವುದರಿಂದ ಅಥವಾ ದಾರಿತಪ್ಪಿಸಲ್ಪಡುವುದರಿಂದ, ನಾನು ಎಡವಿ ಬೀಳುವುದರಿಂದ ಅಥವಾ ನನ್ನನ್ನು ಎಡವಿ ಬೀಳುವಂತೆ ಮಾಡಲ್ಪಡುವುದರಿಂದ, ನಾನು ಯಾರ ಮೇಲಾದರೂ ದೌರ್ಜನ್ಯವೆಸಗುವುದರಿಂದ ಅಥವಾ ನನ್ನ ಮೇಲೆ ದೌರ್ಜನ್ಯವೆಸಗಲ್ಪಡುವುದರಿಂದ, ನಾನು ಅಜ್ಞಾನದ ಕೃತ್ಯವೆಸಗುವುದರಿಂದ ಅಥವಾ ನನ್ನೊಂದಿಗೆ ಅಜ್ಞಾನದ ವರ್ತನೆ ತೋರಲ್ಪಡುವುದರಿಂದ, ನಾನು ಯಾರ ಮೇಲಾದರೂ ಅತಿಕ್ರಮಣ ಮಾಡುವುದರಿಂದ ಅಥವಾ ನನ್ನ ವಿರುದ್ಧ ಅತಿಕ್ರಮಣ ಮಾಡಲ್ಪಡುವುದರಿಂದ ನಿನ್ನಲ್ಲಿ ಅಭಯ ಯಾಚಿಸುತ್ತೇನೆ.".

ಹಝ್ರತ್ ಅಬೂಹುರೈರಾ(ರ)ರಿಂದ ವರದಿಯಾಗಿದೆ: ರಸೂಲುಲ್ಲಾಹ್(ಸ) ಹಝ್ರತ್ ಬಿಲಾಲ್(ರ)ರ ಬಳಿಗೆ ತೆರಳಿದರು. ಅವರ ಬಳಿ ಖರ್ಜೂರಗಳ ಒಂದು ರಾಶಿಯನ್ನು ನೋಡಿ ಅವರೊಡನೆ ನಬಿ(ಸ) ಹೀಗೆ ಕೇಳಿದರು: "ಹೇ ಬಿಲಾಲ್ ಇದೇನು?" ಹಝ್ರತ್ ಬಿಲಾಲ್(ರ) ಹೇಳಿದರು: "ಇವು ನಿಮಗಾಗಿ ನಾನು ಕೂಡಿಟ್ಟಿರುವ ಕೆಲವು ಖರ್ಜೂರಗಳಾಗಿವೆ.". ನಬಿ(ಸ) ಹೇಳಿದರು: "ಹೇ ಬಿಲಾಲ್, ಪುನರುತ್ಥಾನದ ದಿನದಂದು ಇದರ ಹೊಗೆ ನರಕದಲ್ಲಿ ಏಳಬಹುದೆಂಬ ಭಯ ನಿನಗಿಲ್ಲವೇ? ಹೇ ಬಿಲಾಲ್, ಖರ್ಚು ಮಾಡು ಮತ್ತು ಸಿಂಹಾಸನದ ಒಡೆಯನು ಇರುವಾಗ ಬಡತನದ ಬಗ್ಗೆ ಭಯ ಪಡಬೇಡ.".

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನು ದೇವನ ಆಜ್ಞೆಗಳ ಪ್ರಕಾರ ನಡೆಯುವಾಗ ಮತ್ತು ದೇವನ ಮೇಲೆ ತನ್ನ ಭರವಸೆಯನ್ನು ಸ್ಥಾಪಿಸುವಾಗ ಮಾತ್ರ ಅವನ ಈಮಾನ್ ಪ್ರಗತಿ ಹೊಂದಲು ಸಾಧ್ಯ. ಹಝ್ರತ್ ಪೈಗಂಬರ್(ಸ) ಹಝ್ರತ್ ಬಿಲಾಲ್(ರ)ರೊಡನೆ ಹೀಗೆ ಕೇಳಿದರು: 'ನಾಳೆಯ ದೇವನ ಮೇಲೆ ನಿನಗೆ ನಂಬಿಕೆಯಿಲ್ಲವೇ? ಇಂದು ನಿನಗೆ ನೀಡುತ್ತಿರುವ ದೇವನು ನಾಳೆ ನೀಡುವುದಿಲ್ಲವೇ?' ಆದರೆ ಈ ಉಪದೇಶದ ಅರ್ಥ, ದುಂದುವೆಚ್ಚ ಮಾಡಬೇಕು ಅಥವಾ ಬೇಕಾದ ಸಾಧನಗಳ ವ್ಯವಸ್ಥೆಯನ್ನು

ಮಾಡಿಟ್ಟುಕೊಳ್ಳಬಾರದು ಎಂದಲ್ಲ. ಸಾಧನಗಳನ್ನು ಉಪಯೋಗಿಸುವುದು ಕೂಡ ಅಗತ್ಯ ಹಾಗೂ ಅಲ್ಲಾಹನ ಮೇಲೆ ಭರವಸೆ ಇಡುವುದು ಕೂಡ ಅವಶ್ಯಕವಾಗಿದೆ. ತವಕ್ಕುಲ್ ಎಂದರೆ ಎಚ್ಚರಿಕೆ ವಹಿಸದೇ ಇರುವುದು ಅಥವಾ ಸಾಧನಗಳನ್ನು ಬಳಸದಿರುವುದು ಎಂದಲ್ಲ.

ಹಝ್ರತ್ ಅನಸ್ ಬಿನ್ ಮಾಲಿಕ್[ರ] ವಿವರಿಸುತ್ತಾರೆ: ಒಬ್ಬ ವ್ಯಕ್ತಿ ಹೇಳಿದನು, "ಯಾ ರಸೂಲಲ್ಲಾಹ್, ನಾನು ಒಂಟೆಯನ್ನು ಕಟ್ಟಿ ಹಾಕಿ ತವಕ್ಕುಲ್ ಇರಿಸಬೇಕೇ ಅಥವಾ ಅದನ್ನು ಬಿಚ್ಚಿಟ್ಟು ತವಕ್ಕುಲ್ ಇರಿಸಬೇಕೇ?" ನಬಿ[ಸ] ಹೇಳಿದರು: "ಅದರ ಮೊಣಕಾಲನ್ನು ಕಟ್ಟಿ ತವಕ್ಕುಲ್ ಮಾಡು."

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ದೇವನ ಮೇಲಿನ ತವಕ್ಕುಲ್ ಎಂದರೆ ಮನುಷ್ಯನು ಉಪಾಯ ಮತ್ತು ಪ್ರಯತ್ನವನ್ನು ಕೈಬಿಡಬೇಕು ಎಂದರ್ಥವಲ್ಲ, ಬದಲಾಗಿ ಉಪಾಯವನ್ನು ಸಂಪೂರ್ಣವಾಗಿ ಮಾಡಿದ ನಂತರ ಫಲಿತಾಂಶವನ್ನು ದೇವನಿಗೆ ಬಿಡುವುದೇ ತವಕ್ಕುಲ್ ಆಗಿದೆ. ಮನುಷ್ಯನು ಉಪಾಯ ಮಾಡದೆ ಕೇವಲ ತವಕ್ಕುಲ್ ಇಟ್ಟರೆ, ಅವನ ತವಕ್ಕುಲ್ ಟೊಳ್ಳಾಗಿರುತ್ತದೆ; ಅದೇ ರೀತಿಯಲ್ಲಿ, ಕೇವಲ ಉಪಾಯ ಮಾಡಿ ಅದರ ಮೇಲೆಯೇ ವಿಶ್ವಾಸವಿಟ್ಟು ದೇವನ ಮೇಲೆ ಭರವಸೆ ಇಡದಿದ್ದರೆ, ಆ ಉಪಾಯ ಕೂಡ ಟೊಳ್ಳಾಗಿರುತ್ತದೆ.

ಹಝ್ರತ್ ಆಯಿಶಾ[ರ] ವಿವರಿಸುತ್ತಾರೆ: ರಸೂಲುಲ್ಲಾಹ್[ಸ]ರ ಬಳಿ ಕೆಲವು ದೀನಾರ್‌ಗಳು ಬಂದವು. ನಬಿ[ಸ] ಅವುಗಳಲ್ಲಿ ಎಲ್ಲವನ್ನೂ ಹಂಚಿಬಿಟ್ಟರು. ಆರು ದೀನಾರ್‌ಗಳು ಮಾತ್ರ ಉಳಿದಿದ್ದವು, ಅವುಗಳನ್ನು ನಬಿ[ಸ] ತಮ್ಮ ಪರಿಶುದ್ಧ ಪತ್ನಿಯರ ಪೈಕಿ ಒಬ್ಬರ ಬಳಿ ಇಡಲು ಕೊಟ್ಟರು. ತಮ್ಮ ಕೊನೆಯ ಕಾಯಿಲೆಯ ಸಮಯದಲ್ಲಿ ನಬಿ[ಸ] ಆ ದೀನಾರ್‌ಗಳ ಬಗ್ಗೆ ವಿಚಾರಿಸಿದರು. ಅವು ಇನ್ನೂ ಖರ್ಚಾಗಿಲ್ಲ ಎಂದು ತಿಳಿಸಿದಾಗ, ಆ ದೀನಾರ್‌ಗಳನ್ನು ತರಿಸಲಾಯಿತು. ನಬಿ[ಸ] ಅವುಗಳನ್ನು ತಮ್ಮ ಅಂಗೈಯಲ್ಲಿಟ್ಟುಕೊಂಡು ಎಣಿಸಿದಾಗ ಅವು ಆರು ದೀನಾರ್‌ಗಳು ಇದ್ದವು, ಆಗ ನಬಿ[ಸ] ಹೇಳಿದರು: "ಮುಹಮ್ಮದ್ ತನ್ನ ದೇವನನ್ನು ಭೇಟಿಯಾಗುವಾಗ ಮತ್ತು ಲೋಕದಿಂದ ನಿರ್ಗಮಿಸುವಾಗ ಈ ದೀನಾರ್‌ಗಳು ಅವನ ಬಳಿಯಿದ್ದರೆ, ಅವನು ತನ್ನ ಪ್ರಭುವಿನ ಮೇಲೆ ಇಟ್ಟ ಭರವಸೆಯಾದರೂ ಎಂಥದ್ದು?". ನಂತರ ನಬಿ[ಸ] ಆ ಎಲ್ಲ ದೀನಾರ್‌ಗಳನ್ನು ಅಲ್ಲಾಹನ ಮಾರ್ಗದಲ್ಲಿ ದಾನ ಮಾಡಿಬಿಟ್ಟರು ಮತ್ತು ಅದೇ ದಿನ ನಬಿ[ಸ] ನಿಧನ ಹೊಂದಿದರು. ಅಲ್ಲಾಹನು ನಮಗಾಗಿ ಏನನ್ನು ನಿಗದಿಪಡಿಸಿದ್ದಾನೋ ಅದು ಮಾತ್ರ ನಮಗೆ ತಲುಪುತ್ತದೆ ಎಂದು ಅಲ್ಲಾಹನು ಹೇಳುತ್ತಾನೆ. ಅವನೇ ನಮ್ಮ ಕಾರ್ಯನಿರ್ವಾಹಕನಾಗಿದ್ದಾನೆ ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು.

ಹಝ್ರತ್ ಪೈಗಂಬರ್[ಸ]ರ ಮಾದರಿಯಲ್ಲಿ ತವಕ್ಕುಲಿನ ಅತ್ಯುತ್ತಮ ಉದಾಹರಣೆಯು ಮುಸೈಲಮಾ ಕದ್ದಾಬ್‌ನ ಘಟನೆಯಲ್ಲೂ ಸಿಗುತ್ತದೆ. ಮುಸೈಲಮಾ ಕದ್ದಾಬ್ ರಸೂಲುಲ್ಲಾಹ್[ಸ]ರ ಕಾಲದಲ್ಲಿ ಬಂದು ಹೀಗೆ ಹೇಳಿದನು: "ನಬಿ[ಸ]ರ ನಂತರ ನನ್ನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದರೆ, ನಾನು ಅವರ ಅನುಯಾಯಿಯಾಗುತ್ತೇನೆ." ಅವನು ತನ್ನ ಜನಾಂಗದ ಒಂದು ದೊಡ್ಡ ಗುಂಪಿನೊಂದಿಗೆ ಮದೀನಾಕ್ಕೆ ಬಂದಿದ್ದನು. ರಸೂಲುಲ್ಲಾಹ್[ಸ] ಅವನ ಬಳಿಗೆ ತೆರಳಿದರು. ಹಝ್ರತ್ ಸಾಬಿತ್ ಬಿನ್ ಖೈಸ್ ಬಿನ್ ಶಮ್ಮಾಸ್[ರ] ನಬಿ[ಸ]ರ ಜೊತೆಯಲ್ಲಿದ್ದರು. ರಸೂಲುಲ್ಲಾಹ್[ಸ]ರ ಕೈಯಲ್ಲಿ ಖರ್ಜೂರದ ಗರಿಯ ಒಂದು ತುಂಡಿತ್ತು. ನಬಿ[ಸ] ಮುಸೈಲಮಾನ ಮುಂದೆ ನಿಂತು ಹೀಗೆ ಹೇಳಿದರು: "ನೀನು ನನ್ನೊಡನೆ ಈ ಗರಿಯನ್ನು ಕೇಳಿದರೆ ಕೂಡ ನಾನು ನಿನಗೆ ಅದನ್ನು ಕೊಡಲಾರೆ. ದೇವನು ನಿನಗಾಗಿ ಏನನ್ನು ನಿಗದಿಪಡಿಸಿದ್ದಾನೋ ಅದಕ್ಕಿಂತ ಮುಂದೆ ನೀನು ಹೋಗಲಾರೆ. ನೀನು ಬೆನ್ನು ತಿರುಗಿಸಿ ಹೋದರೆ, ಅಲ್ಲಾಹನು ನಿನ್ನ ಹಿಮ್ಮಡಿಯನ್ನು ಕತ್ತರಿಸುವನು.".

ಹಝ್ರತ್ ಮುಸ್ಲಿಹ್ ಮೌಊದ್[ರ] ಈ ಬಗ್ಗೆ ಹೇಳುತ್ತಾರೆ: ನಬಿ[ಸ]ರಿಗೆ ಯಾವುದೇ ಕೆಲಸದಲ್ಲೂ ಲೋಕ ಮತ್ತು ಲೌಕಿಕ ಜನರ ಕಡೆಗೆ ಗಮನವಿರಿಸಲಿಲ್ಲ, ಭೌತಿಕ ಸಾಧನಗಳ ಕಡೆಗೆ ನಬಿ[ಸ] ಕಣ್ಣೆತ್ತಿಯೂ ನೋಡುತ್ತಿರಲಿಲ್ಲ; ಬದಲಾಗಿ ಪ್ರತಿಯೊಂದು ಕಾರ್ಯದಲ್ಲೂ ನಬಿ[ಸ]ರ ದೃಷ್ಟಿ ದೇವನ ಕಡೆಗೇ ನೆಟ್ಟಿರುತ್ತಿತ್ತು, ಅವನೇ ಎಲ್ಲವನ್ನೂ ಮಾಡುವವನಾಗಿದ್ದಾನೆ ಎಂದು. ನಬಿ[ಸ] ತವಕ್ಕುಲಿನ ಒಂದು ಪರಿಪೂರ್ಣ ಮಾದರಿಯಾಗಿದ್ದರು. ನಬಿ[ಸ]ರ ಜೀವಿತಾವಧಿಯಲ್ಲಿ ಮುಸೈಲಮಾ ಒಂದು ಬೃಹತ್ ಸೈನ್ಯದೊಂದಿಗೆ ಮದೀನಾಕ್ಕೆ ಬಂದು ಹೀಗೆ ಹೇಳಿದನು: 'ನೀವು ನನ್ನನ್ನು ನಿಮ್ಮ ನಂತರ ಖಲೀಫನನ್ನಾಗಿ ಮಾಡಿದರೆ, ನಾನು ನನ್ನ ಗುಂಪಿನೊಂದಿಗೆ ನಿಮ್ಮನ್ನು ಅನುಸರಿಸುತ್ತೇನೆ.' ಆದರೆ ನಬಿ[ಸ] ಈ ವಿನಂತಿಯನ್ನು ತಕ್ಷಣವೇ ತಿರಸ್ಕರಿಸಿದರು. ಆ ಸಮಯದಲ್ಲಿ ಸತ್ಯನಿಷೇಧಿಗಳ ಪ್ರಾಬಲ್ಯವಿತ್ತು, ನಬಿ[ಸ]ರಿಗೆ ಕಿರುಕುಳ ನೀಡಲಾಗುತ್ತಿತ್ತು, ಇರಾನ್ ಮತ್ತು ರೋಮಿನ ಆಡಳಿತಗಾರರು ಆದೇಶಗಳನ್ನು ಕಳುಹಿಸುತ್ತಿದ್ದರು, ಬನೂ ಗಸ್ಸಾನ್‌ರು ಯುದ್ಧದ ಸಿದ್ಧತೆಗಳನ್ನು ಮಾಡುತ್ತಿದ್ದರು ಮತ್ತು ವಿವಿಧ ಆಡಳಿತಗಳು ಈ ಹೊಸ ಚಳುವಳಿಯನ್ನು ಅನುಮಾನದ ದೃಷ್ಟಿಯಿಂದ ನೋಡುತ್ತಿದ್ದವು. ಇಂತಹ ಸಮಯದಲ್ಲಿ, ಸ್ನೇಹಿತರು ಮತ್ತು ಶತ್ರುಗಳನ್ನು ತಮ್ಮೊಂದಿಗೆ ಸೇರಿಸಿಕೊಳ್ಳಬೇಕೆಂದು ಮಾನವ ಬುದ್ಧಿ ಬಯಸುತ್ತದೆ, ಆದರೆ ನಬಿ[ಸ]ರ ಭರವಸೆ ದೇವನ ಮೇಲಿತ್ತು. ನಬಿ[ಸ]ರ ಹೃದಯವು ದೃಢನಂಬಿಕೆಯಿಂದ ತುಂಬಿತ್ತು ಮತ್ತು ಎದೆಯು ಸತ್ಯವಿಶ್ವಾಸದಿಂದ ಭರಿತವಾಗಿತ್ತು. ಮುಸೈಲಮಾ ಮತ್ತು ಅವನ ಸೈನ್ಯದ ಮೇಲೆ ಭರವಸೆ ಇಡುವುದನ್ನು ನಬಿ[ಸ] ಒಂದು ಕ್ಷಣಕ್ಕೂ ಸೂಕ್ತವೆಂದು ಭಾವಿಸಲಿಲ್ಲ, ಖರ್ಜೂರದ ಒಂದು ಗರಿಯ ಬದಲಿಗೆ ಅವನ ಬೆಂಬಲವನ್ನು ಪಡೆಯಬೇಕಾದರೂ, ಅವನ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಈ ಘಟನೆಯಿಂದ ತಿಳಿಯುವುದೇನೆಂದರೆ, ನಬಿ[ಸ]ರ ನಿರಾಕರಣೆಯು ಯಾವುದೇ ಲೌಕಿಕ ಉದ್ದೇಶಕ್ಕಾಗಿ ಆಗಿರಲಿಲ್ಲ, ಬದಲಾಗಿ ದೇವನ ಮೇಲಿನ ಅಪಾರ ದೃಢನಂಬಿಕೆ ಮತ್ತು ಪರಿಪೂರ್ಣ

ಭರವಸೆಯ ಫಲಿತಾಂಶವಾಗಿತ್ತು. ನಬಿ(ಸ) ತಮ್ಮ ಮಕ್ಕಳನ್ನು ತಮ್ಮ ನಂತರ ಉತ್ತರಾಧಿಕಾರಿಯನ್ನಾಗಿ ಮಾಡಲಿಲ್ಲ, ಬದಲಾಗಿ ಹಝ್ರತ್ ಅಬೂಬಕರ್(ರ)ರ ಖಿಲಾಫತ್‌ನತ್ತ ಸೂಚನೆ ನೀಡಿದರು. ನಬಿ(ಸ) ಬಯಸಿದ್ದರೆ ಮುಸೈಲಮಾನನ್ನು ಹಿಡಿದು ವಧಿಸಬಹುದಾಗಿತ್ತು, ಏಕೆಂದರೆ ಅವನು ಮದೀನಾದಲ್ಲಿ ನಬಿ(ಸ)ರ ಅಧೀನದಲ್ಲಿ ಇದ್ದನು, ಆದರೆ ಈ ವಿಷಯದಲ್ಲೂ ನಬಿ(ಸ) ಅಲ್ಲಾಹನ ಮೇಲೆ ಭರವಸೆ ಇಟ್ಟರು; ಅವನೇ ಸ್ವತಃ ಈ ಪೀಡಕನನ್ನು ನಾಶಮಾಡುತ್ತಾನೆ ಎಂದು. ಹಾಗಾಗಿ ನಬಿ(ಸ)ರ ಜೀವನವು ನಮಗೆ ತವಕ್ಕುಲಿನ ಈ ಉನ್ನತ ಮಾದರಿಯನ್ನು ತೋರಿಸುತ್ತದೆ: ಅಲ್ಲಾಹನ ಕಡೆಗೆ ಸಂಪೂರ್ಣವಾಗಿ ವಾಲಿಕೊಳ್ಳುವುದು, ಅವನ ಸಂಪ್ರೀತಿಗೆ ಆದ್ಯತೆ ನೀಡುವುದು, ಲೌಕಿಕ ವಿರೋಧದಿಂದ ಪ್ರಭಾವಿತರಾಗದಿರುವುದು, ಅಗತ್ಯ ಮಾರ್ಗಗಳ ಉಪಯೋಗ ಮಾಡಿಕೊಂಡು ಫಲಿತಾಂಶವನ್ನು ಅಲ್ಲಾಹನಿಗೆ ಬಿಡುವುದು ಮತ್ತು ಪ್ರತಿಯೊಂದು ಸ್ಥಿತಿಯಲ್ಲೂ ಅವನ ಸಹಾಯದ ಮೇಲೆ ದೃಢನಂಬಿಕೆ ಇಡುವುದೇ ನಿಜವಾದ ತವಕ್ಕುಲ್ ಆಗಿದೆ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್.**

ಖುತ್ಬದ ಕೊನೆಯಲ್ಲಿ ಹುಝೂರ್ ಶಹೀದ್ ಆದ ಮಿರ್ಝಾ ಸಫ್‌ದರ್ ಮಹ್ಮೂದ್ ಸಾಹಿಬ್ ಮತ್ತು ಇತರ ಇಬ್ಬರು ದಿವಂಗತರ ಜನಾಝ಼ ಗ಼ಾಯಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

————————————*****————————————

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 04-09-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon